ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎ.ಸಿ.ಜೆ.ಎಂ. ನ್ಯಾಯಾಲಯ, ಉಡುಪಿ.

ಸಿ.ಸಿ.:**2172/2023**

ಸಿ.ಡಬ್ಲ್ಯು.**6** ಪಿ.ಡಬ್ಲ್ಯೂ : **1**

| | |
|---|---|
| ಸಾಕ್ಷಿದಾರರ ಹೆಸರು | ಪುಷ್ಪ ಶೆಣ್ಯೆ |
| ಗಂಡನ ಹೆಸರು | ಗೋಪಾಲ ಕೃಷ್ಣ ಶೆಣ್ಯೆ |
| ವಯಸ್ಸು | **68** ವರ್ಷ |
| ಉದ್ಯೋಗ | ಗೃಹಿಣಿ |
| ವಾಸಸ್ಥಳ | ಎರ್ಮಾಳ್ ಉಡುಪಿ. |

ದಿನಾಂಕಃ **24.11.2023** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ  ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದಃ

ನಾನು ಬಡಾ ಎರ್ಮಾಳಿನಲ್ಲಿ ವಾಸವಾಗಿದ್ದು, ಮನೆ ಕೆಲಸ ಮಾಡಿಕೊಂಡಿದ್ದೇನೆ. ಸುಮಾರು **4-5** ವರ್ಷಗಳ ಹಿಂದೆ ನನ್ನ ಮನೆಯಲ್ಲಿ ಕಪಾಟಿನಲ್ಲಿ ಮಂಗಳಸೂತ್ರ, ಓಲೆ, ಬಳೆ, ಚೈನು ಮತ್ತು ಉಂಗುರವನ್ನು ಇಟ್ಟು ದೇವಸ್ಥಾನಕ್ಕೆ ಹೋಗಿದ್ದೆವು. ಆ ರೀತಿ ಹೋಗುವಾಗ ಮನೆಗೆ ಬೀಗ ಹಾಕಿ ಹೋದ್ದೆವು. ಬೀಗದ ಕೀಯನ್ನು ಕಿಟಕಿ ಬಳಿ ಬಂದು ಕವರಿನಲ್ಲಿ ಹಾಕಿ ಇಟ್ಟಿರುತ್ತೇನೆ. ಆ ಕವರನ್ನು ಕಿಟಕಿ ಬಳಿ ಮನೆಯ ಒಳಗೆ ಇಡಲಾಗಿತ್ತು.  ನನ್ನ ಮಕ್ಕಳು ಶಾಲೆಗೆ ಹೋಗಿದ್ದು ಅವರು ವಾಪಸ್ಸು ಬಂದರೆ ಬೀಗದ ಕೀ ಸಿಗಲಿ ಎಂದು ಆ ಜಾಗದಲ್ಲಿ ಬೀಗದ ಕೀ ಇಟ್ಟಿದ್ದೆ. ಆ ರೀತಿ ನಾನು ಮಧ್ಯಾಹ್ನ **12.00** ಗಂಟೆಗೆ ದೇವಸ್ಥಾನಕ್ಕೆ ಹೋಗಿ ರಾತ್ರಿ **10.00** ಗಂಟೆಗೆ ವಾಪಸ್ಸು ಬಂದಿರುತ್ತೇನೆ. ನನ್ನ ಮಕ್ಕಳು ನೇರವಾಗಿ ದೇವಸ್ಥಾನಕ್ಕೆ ಬಂದಿರುತ್ತಾರೆ.  ನಂತರ ನಾನು ಮತ್ತು ನನ್ನ ಗಂಡ ದೇವಸ್ಥಾನದಿಂದ  ರಾತ್ರಿ **10.00** ಗಂಟೆಗೆ ಮನೆಗೆ ಬಂದಾಗ ಹಿಂದಿನ ಬಾಗಿಲು ತೆರೆದಿತ್ತು.  ಕಪಾಟುಗಳು ತೆರೆದಿತ್ತು.  ಅಲ್ಲಿ ಇಟ್ಟಿದ್ದ ಯಾವುದೇ ಬಂಗಾರದ ವಸ್ತುಗಳು ಅಲ್ಲಿ ಇರಲಿಲ್ಲ.  ಅವು ಕಳ್ಳತನವಾಗಿದ್ದವು.  ಚಿನ್ನ ಬಿಟ್ಟು ಬೇರೆ ಯಾವುದೇ  ವಸ್ತು ಕಳುವಾಗಿಲ್ಲ.  ಬೀಗದ ಕೀಗಳನ್ನು ಸಹಾ ಕಳ್ಳರು ಕದ್ದುಕೊಂಡು ಹೋಗಿರುತ್ತಾರೆ.  ಬೆಳ್ಳಿ ತೀರ್ಥ ತಟ್ಟೆ, ಕುಂಕುಮ ಬಟ್ಟಲು, ಸಣ್ಣ ದೀಪ ಮತ್ತು ಒಂದು ಬೆಳ್ಳಿಯ ತೀರ್ಥ ಚಮಚ ಸಹಾ ಕಳುವಾಗಿರುತ್ತದೆ.  ಈ ಬಗ್ಗೆ ಅದೇ ದಿನ  ರಾತ್ರಿ ಪೋಲೀಸ್ ಠಾಣೆಯಲ್ಲಿ ನನ್ನ ಗಂಡ ದೂರು ನೀಡಿರುತ್ತಾರೆ. ಈಗ

ಬಂಗಾರ ನನಗೆ ಸಿಕ್ಕಿರುತ್ತದೆ. ಕಳ್ಳತನವಾದ 2 ವರ್ಷದ ನಂತರ ಮಂಗಳೂರು ಪೋಲೀಸ್ ಠಾಣೆಯವರು ನನ್ನನ್ನು ಕರೆಸಿ ನಮ್ಮ ಕಳುವಾದ ಬಂಗಾರವು ಠಾಣೆಯಲ್ಲಿ ಇದ್ದು ಠಾಣೆಯಲ್ಲಿ ಅದನ್ನು ತೋರಿಸಿರುತ್ತಾರೆ. ವಸ್ತುಗಳನ್ನು ಬಿಟ್ಟು ಯಾವುದೇ ವ್ಯಕ್ತಿಯನ್ನು ನಾನು ಠಾಣೆಯಲ್ಲಿ ನೋಡಲಿಲ್ಲ.

ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ ಎಚ್.ಎಚ್.ಕೆ. ವಕೀಲರವರಿಂದಃ

ನಾನು ಮತ್ತು ನನ್ನ ಗಂಡ ಇಬ್ಬರೂ ಸೇರಿ ಪೋಲೀಸರಿಗೆ ಕಳುವಿನ ವಿಚಾರ ತಿಳಿಸಿದ್ದೇವೆ. ಆಗ ಸಮಯ ಸುಮಾರು 10 ವರೆ ಆಗಿರಬಹುದು. ತಕ್ಷೀರು ನಡೆದ ದಿನವೇ ಈ ವಿಚಾರ ತಿಳಿಸಿರುತ್ತೇವೆ. ಅದೇ ದಿನ ಪೋಲೀಸರು ನನ್ನ ಗಂಡನ ಹೇಳಿಕೆ ಬರೆದುಕೊಂಡಿರುತ್ತಾರೆ ಮತ್ತು ನನ್ನ ಮಕ್ಕಳ ಹೇಳಿಕೆ ಸಹಾ ಅದೇ ದಿನ ಪಡೆದುಕೊಂಡಿರುತ್ತಾರೆ. ಆನಂತರ ಪೋಲೀಸರು ಕಳ್ಳನು ಸಿಗುವವರೆಗೂ ಮನೆಗೆ ಬರಲಿಲ್ಲ. ನಾನು ಯಾವುದೇ ಹೇಳಿಕೆಯನ್ನು ಆನಂತರ ನೀಡಿಲ್ಲ. ನನ್ನ ಗಂಡನವರು ಕೊಟ್ಟಿದ್ದರೆ ನನಗೆ ಗೊತ್ತಿಲ್ಲ. ಕಳುವಾದ ಸ್ವತ್ತಿಗೆ ಸಂಬಂಧಿಸಿದಂತೆ ನಾನು ಯಾವುದೇ ರಶೀದಿಯನ್ನು ಪೋಲೀಸರಿಗೆ ನೀಡಿಲ್ಲ. ನನ್ನ ಗಂಡ ಕೊಟ್ಟ ಬಗ್ಗೆ ನನಗೆ ಗೊತ್ತಿಲ್ಲ. ಅದರ ಬಗ್ಗೆ ನನ್ನ ಬಳಿ ದಾಖಲೆ ಇಲ್ಲ ಎಂದರೆ ಸರಿ. ಆದರೆ ಬಂಗಾರದ ವಸ್ತುಗಳು ನಮ್ಮವೇ ಆಗಿರುತ್ತವೆ. ಆ ವಸ್ತುಗಳ ಮೇಲೆ ನನ್ನ ಹೆಸರು ಬರೆದಿಲ್ಲ ಎಂದರೆ ಸರಿ. ಪೋಲೀಸರು ಬರೆದ ದಾಖಲೆಯನ್ನು ನನ್ನಿಂದ, ನನ್ನ ಗಂಡನಿಂದ ಮತ್ತು ಮಕ್ಕಳಿಂದ ಓದಿಸಿದ್ದಾರೆ. ನನ್ನ ಗಂಡ ನೀಡಿದ ದೂರನ್ನು ನಾನು ಓದಿ ತಿಳಿದುಕೊಂಡಿದ್ದೇನೆ.

ವಶಪಡಿಸಿಕೊಂಡ ಚಿನ್ನ ನಮ್ಮದ್ದಲ್ಲ. ನಮ್ಮ ಮನೆಯಿಂದ ಯಾವುದೇ ಕಳ್ಳತನವಾಗಿಲ್ಲ ಎಂದರೆ ಸರಿಯಲ್ಲ. ಪೋಲೀಸರು ಹೇಳಿದ್ದರಿಂದ ಅವುಗಳನ್ನು ನನ್ನ ಚಿನ್ನ ಎಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಗಂಡ ಮಂಗಳೂರು ಪೋಲೀಸ್ ಠಾಣೆಗೆ ಚಿನ್ನ ನೋಡಲು ಹೋಗಿದ್ದೆವು. ನಮ್ಮ ಚಿನ್ನ

ಬಿಟ್ಟು, ಬೇರೆ ಚಿನ್ನ ಸಹಾ ಪೋಲೀಸ್ ಠಾಣೆಯಲ್ಲಿ ಇತ್ತು. ನನ್ನ ಗಂಡನಿಂದ ಯಾವುದಾದರೂ ಬರವಣಿಗೆ ತೆಗೆದುಕೊಂಡಿದ್ದಾರೋ ಇಲ್ಲವೋ ಜ್ಞಾಪಕ ಇಲ್ಲ. ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಎಂದು ಒಪ್ಪಿದ್ದೇನೆ.

ಹೆ.ಹಿ.ಸಿ.ನ್ಯಾ. ಮತ್ತು ಎಸಿಜೆಎಂ ಉಡುಪಿ.